ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಗೆ ಈ ದಿನ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು- ಪ್ರತಿವಾದಿ ನಂ.**1, 5** ಮತ್ತು **6** ರ ಪರ ವಕೀಲರಾದ ಶ್ರೀ ಎನ್ ಎನ್ ಪಿ ವಕೀಲರಿಂದ.</u>

ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರು ನನ್ನ ಮಕ್ಕಳು. 6 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ. ಸಾಕ್ಷಿಗೆ ನಿಡಿ-1 ಮತ್ತು 2 ನ್ನು ತೋರಿಸಿದಾಗ ಅವುಗಳಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಆದ್ದರಿಂದ ಸಾಕ್ಷಿಯ ಸಹಿಗಳನ್ನು ನಿಡಿ-1(ಎ) ಮತ್ತು ನಿಡಿ-2(ಎ) ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ರಲ್ಲಿ ಇರುವ ಅಂಶಗಳು ಸತ್ಯವಾಗಿರುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಯನ್ನು ನಾನು ನೋಡಿ ತಿಳಿದುಕೊಂಡಿದ್ದೇನೆ. ಸಾಕ್ಷಿಗೆ ನಿಡಿ-8 ನ್ನು ತೋರಿಸಿ ಅದರಲ್ಲಿ ತಮ್ಮ ಸಹಿ ಇರುವುದಾಗಿ ಕೇಳಿದ್ದರಿಂದ ಸಾಕ್ಷಿ ಇದೆ ಎಂದು ನೋಡಿ ಗುರುತಿಸುತ್ತಾರೆ. ಆದ್ದರಿಂದ ಸಾಕ್ಷಿ ಸಹಿಯನ್ನು ನಿಡಿ-8(ಎ) ಎಂದು ಗುರುತಿಸಲಾಯಿತು. ನನ್ನ ಗಂಡನ ಮನೆತನಕ್ಕೆ ಸರ್ವೆ ನಂ.7/5, 63/5, 63/8 ರಲ್ಲಿ ಜಮೀನುಗಳು ಇವೆ ಎಂದರೆ ಸರಿ. ಒಂದು ಮನೆ ಇತ್ತು ಅದರ ನಂಬರ ನನಗೆ ಗೊತ್ತಿಲ್ಲ. ಸರ್ವೆ ನಂ.63/8 ರ 3 ಎಕರೆ 29 ಗುಂಟೆ ಜಮೀನನ್ನು 5 ನೇ ಪ್ರತಿವಾದಿಗೆ ನಾವೆಲ್ಲರೂ ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸದರಿ ಕ್ರಯಪತ್ರ ದಿನಾಂಕಃ 18.11.1997 ರಂದು ನೋಂದಣಿಯಾಗಿದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಇವತ್ತಿನವರೆಗೂ 5 ನೇ ಪ್ರತಿವಾದಿ ಕಬ್ಜಾ ವಹಿವಾಟಿಯಲ್ಲಿದ್ದಾನೆ ಎಂದರೆ ಸರಿ. ನಾನು ಈ ಹಿಂದೆ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂ.34/1985 ನ್ನು ಶಿವಪ್ಪ ಮತ್ತು ಬಸವರಾಜ ಇವರ ವಿರುದ್ಧ ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ದಿನಾಂಕಃ 28.01.1986 ರಂದು ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಮಾಡಿಕೊಂಡ ರಾಜೀ ಪ್ರಕಾರ ಅವರವರ ಹಿಸ್ಸೆಗೆ ಬಂದ ಆಸ್ತಿಯನ್ನು ಅವರವರೇ ಹೆಸರಿನಲ್ಲಿ ದಾಖಲಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಮಾಡಿಕೊಂಡ ರಾಜೀ ಪ್ರಕಾರ ನಿಡಿ-4 ರಂತೆ ಅವರವರ ಹೆಸರನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿ ಪಂಚಾಯತಿ ಆಸ್ತಿ ನಂ.92/1 ರಲ್ಲಿ, ಬಸವ ವಸತಿ ಯೋಜನೆ ಅಡಿಯಲ್ಲಿ 2010-11 ರ ಸಾಲಿನಲ್ಲಿ ಮನೆ ಕಟ್ಟಿಸಿಕೊಂಡು ಅಲ್ಲಿ ವಾಸವಾಗಿದ್ದಾರೆ ಎಂದರೆ ಇರಬಹುದು. ಸದರಿ ಮನೆಯಲ್ಲಿ ಪ್ರತಿವಾದಿ ನಂ.6 ಮತ್ತು ಅವರ

ಕುಟುಂಬ ಸದಸ್ಯರು ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸಹಿ ಮಾಡಿದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ ಅದನ್ನು ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಗಂಗವ್ವ ಯಾರು ಎಂದು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಸರ್ವೆ ನಂ.63/5 ಮತ್ತು 63/8 ರಲ್ಲಿಯ ಆಸ್ತಿಗಳು ಅಸಲು ದಾವೆ ನಂ.34/1985 ರ ರಾಜೀ ಪ್ರಕಾರ 1 ರಿಂದ 4 ನೇ ಪ್ರತಿವಾದಿಯರಿಗೆ ಸಾಮೂಹಿಕವಾಗಿ ಆಸ್ತಿ ಬಂದಿತ್ತು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ನಂ.1 ರಿಂದ 4 ರವರ ಜೊತೆ ಮಿಲಾಪಿಯಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಕಳಲಕೊಂಡ ಗ್ರಾಮದಲ್ಲಿ ವಾಸವಾಗಿದ್ದೇನೆ. ಸುಮಾರು 40-50 ವರ್ಷದಿಂದ ಕಳಲಕೊಂಡ ಗ್ರಾಮದಲ್ಲಿ ವಾಸವಾಗಿದ್ದೇನೆ. ವಾದಿ ದಾವೆಯಲ್ಲಿ ಏನು ಪರಿಹಾರ ಕೋರಿ ದಾಖಲಿಸಿದ್ದಾರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.